**ಓ.ಎಸ್. ನಂ. 135/2016** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 28.6.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್.ಎಲ್ ವಕೀಲರಿಂದಃ

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ನೋಡಿ ಪರಿಶೀಲಿಸಿ ಹಾಜರುಪಡಿಸಿರುತ್ತೇನೆ. ನಿಪಿ23 ರಿಂದ ನಿಪಿ28 ರ ಪಹಣಿಗಳಲ್ಲಿ ಅಬ್ದುಲ್ಲ ಬಿನ್ ದಸ್ತಗಿರ್ ಸಾಬ್ ಮತ್ತು ದಸ್ತಗಿರ್ ಸಾಬ್ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ23 ರಿಂದ 28 ಪಹಣಿಗಳಲ್ಲಿರುವ ಆಸ್ತಿಗಳು ದಾವ ಐಟಂ 1 ಮತ್ತು 2 ರ ಆಸ್ತಿಗಳು ಎಂದರೆ ಸರಿ. ನಿಪಿ23 ರಿಂದ ನಿಪಿ28 ದಾಖಲೆಗಳು 2000-01 ರಿಂದ 2002-03 ರ ಸಾಲಿನ ದಾಖಲೆಗಳು ಎಂದರೆ ಸರಿ. ನಿಪಿ8 ಕ್ರಯಪತ್ರವು ದಿನಾಂಕ 10.8.2000 ರಂದು ನೋಂದಣಿಯಾಗಿರುತ್ತದೆ ಎಂದರೆ ಸರಿ. ನಿಪಿ8 ದಾಖಲೆಯಾದಾಗ ದಾವ 1 ಮತ್ತು 2 ನೇ ಐಟಂ ಆಸ್ತಿಗಳು ನಿಪಿ23 ರಿಂದ 28 ರ ಪ್ರಕಾರ ಅಬ್ದುಲ್ಲ ಬಿನ್ ದಸ್ತಗಿರ್ ಸಾಬ್ ಮತ್ತು ದಸ್ತಗಿರ್ ಸಾಬ್ ರವರ ಹೆಸರಿನಲ್ಲಿತ್ತು ಎಂದರೆ ಸರಿ. ನಿಪಿ8 ದಾಖಲೆಯಾದಾಗ ನನ್ನ ತಂದೆ ನಿಪಿ1, 2 ಮತ್ತು 7 ರ ದಾಖಲೆಯನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ8 ದಾಖಲೆಯಾದಾಗ ನನ್ನ ತಂದೆ ಶ್ರೀರಂಗಪಟ್ಟಣದ ಮಹದೇವಪುರ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಮೈಸೂರಿನಲ್ಲಿದ್ದರು ಎನ್ನುವರು. ನಿಪಿ8 ದಾಖಲೆಯಾದಾಗ ನನ್ನ ತಂದೆ ನಿಪಿ15 ರಿಂದ ನಿಪಿ22 ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ8 ದಾಖಲೆಯಾದಾಗ ನನ್ನ ತಂದೆ ಯಾವೆಲ್ಲ ದಾಖಲೆಗಳನ್ನು ನೋಡಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಿಪಿ8 ರಲ್ಲಿ ದಾವ 1 ಮತ್ತು 2 ರ ಆಸ್ತಿಯ ಮೂಲದ ಬಗ್ಗೆ ಸಂಪೂರ್ಣ ವಿವರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಆಸ್ತಿಯನ್ನು ಮಾರಾಟ ಮಾಡಿದವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿದಾರರು ದಸ್ತಗೀರ್ ಸಾಬ್ ರವರಿಂದ ಮಗನಿಗೆ ಬಂದಿರುವ ಬಗ್ಗೆ ನಮೂದಾಗಿರುತ್ತದೆ ಎನ್ನುವರು. ನಿಪಿ8 ಕ್ರಯಪತ್ರವು ಆಸ್ತಿಯ ನೈಜ ಮಾಲೀಕರಾದ ದಸ್ತಗೀರ್ ಮತ್ತು ಅಬ್ದುಲ್ಲ ರವರಿಂದ ಬರೆಸಲ್ಪಟ್ಟ ದಾಖಲಾತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ8 ದಾಖಲೆಯು ಖೊಟ್ಟಿ ದಾಖಲೆಯಾಗಿದ್ದು ಸದರಿ ದಾಖಲೆಯಲ್ಲಿ ನಮೂದಿಸಿರುವ ಮಾರಾಟಗಾರರು ನೈಜ ಮಾಲೀಕರಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯು ಖೊಟ್ಟಿ ದಾಖಲೆಯಾಗಿರುವುದರಿಂದ ಸದರಿ ದಾಖಲೆಯ ಮೇಲೆ ನನ್ನ ತಂದೆ, ನಾನಾಗಲಿ ಅಥವಾ ಇತರ ವಾದಿಯರಾಗಲಿ ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ30 ರಿಂದ ನಿಪಿ34 ಎಂ.ಆರ್ ದಾಖಲೆಗಳನ್ನು ಈ ದಾವೆ ದಾಖಲಿಸುವ ಸಮಯದಲ್ಲಿ ಗಮನಿಸಿರುತ್ತೇನೆ ಮತ್ತು ಅವುಗಳನ್ನು ದಾವೆ ಸಲ್ಲಿಸುವ ಸಮಯದಲ್ಲಿ ಹಾಜರುಪಡಿಸಿರುತ್ತೇನೆ. ನಿಪಿ30 ರಿಂದ ನಿಪಿ34 ದಾಖಲೆಗಳನ್ನು ರದ್ದುಪಡಿಸಲು ಎ.ಸಿ ನ್ಯಾಯಾಲಯಕ್ಕೆ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಈ ದಾವೆ ಹಾಕಿರುತ್ತೇನೆ ಎನ್ನುವರು. ನಿಪಿ30 ರಿಂದ 34 ಎಂ.ಆರ್ ಗಳು ನೈಜವಾಗಿರುವುದರಿಂದ ಅವುಗಳನ್ನು ನಾನು ಪ್ರಶ್ನೆ

ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಈ ದಾವೆ ಹೂಡಿರುತ್ತೇನೆ ಎನ್ನುವರು. ನಿಪಿ8 ದಾಖಲೆಯಾದ ದಿನದಿಂದ ಈ ದಿನದವರೆಗೆ ನಮ್ಮ ಹೆಸರಿಗೆ ಖಾತೆಯಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ಖಾತೆ ಮಾಡಿಸಲು ಅರ್ಜಿ ನೀಡಿದ್ದು, ಆ ಬಗ್ಗೆ ಇ.ಸಿ ಮತ್ತು ಎಂ.ಆರ್ ನಲ್ಲಿ ನಮೂದಾಗಿದ್ದು, ಆದರೆ ಖಾತೆಯಾಗಿರುವುದಿಲ್ಲ ಎನ್ನುವರು. ಖಾತೆಗೆ ಅರ್ಜಿ ನೀಡಿದರೆ ಇ.ಸಿ ಮತ್ತು ಎಂ.ಆರ್ ನಲ್ಲಿ ನಮೂದಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ8 ದಾಖಲೆಯು ಖೊಟ್ಟಿ ದಾಖಲೆಯಾಗಿರುವುದರಿಂದ ಸದರಿ ದಾಖಲೆಯ ಮೂಲಕ ಯಾವುದೇ ಆಸ್ತಿಯ ಸ್ವಾಧೀನ ನನ್ನ ತಂದೆಗೆ ಹಸ್ತಾಂತರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಆಸ್ತಿಯ ಸ್ವಾಧೀನ ಹಸ್ತಾಂತರ ಆಗದಿರುವುದರಿಂದ ನನ್ನ ತಂದೆ ಸದರಿ ಆಸ್ತಿಯ ಮಾಲೀಕರಾಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಒಬ್ಬ ವ್ಯಕ್ತಿ ಆಸ್ತಿಯನ್ನು ಮಾರಾಟ ಅಥವಾ ಬೋಗ್ಯ ಮಾಡಬೇಕಾದರೆ ಆತನು ಆ ಆಸ್ತಿಯ ಮಾಲೀಕನಾಗಿರಬೇಕು ಎಂದರೆ ಸರಿ. ನನ್ನ ತಂದೆ ದಾವಆಸ್ತಿಯ ಮಾಲೀಕನಾಗದಿರುವುದರಿಂದ 2 ನೇ ಪ್ರತಿವಾದಿ ಅಥವಾ ಬೇರೆಯವರಿಗೆ ಬೋಗ್ಯ ವಗೈರೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಭೇಟಿ ಮಾಡಿರುವ ದಸ್ತಗಿರ್ ಸಾಬ್ ರವರ ಮಗ ಅಬ್ದುಲ್ಲ ರವರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಬಿಳಿ ಸ್ವೆಟರ್ ಧರಿಸಿರುವ ಎಡದಿಂದ 2 ನೇ ವ್ಯಕ್ತಿಯು ಅಬ್ದುಲ್ಲ ಆಗಿರುತ್ತಾರೆ. ಸಾಕ್ಷಿದಾರರು ಸದರಿ ಭಾವಚಿತ್ರವನ್ನು ನೋಡಿ ಒಪ್ಪಿದ್ದು, ಸದರಿ ಭಾವಚಿತ್ರಕ್ಕೆ ಸಂಬಂಧಪಟ್ಟ ಸಿ.ಡಿ ಯನ್ನು ಹಾಜರುಪಡಿಸದಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಸದರಿ ಭಾವಚಿತ್ರದಲ್ಲಿರುವ ಉಳಿದ ಮೂವರು ಸದರಿ ಅಬ್ದುಲ್ಲ ರವರ ಸಹೋದರರು ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ10 ರ ಎರಡನೇ ಪುಟದಲ್ಲಿರುವ ಬರೆದುಕೊಟ್ಟಿದ್ದಾರೆ ಎಂದು ಒಪ್ಪಿರುವ ಕ್ರಮ ಸಂಖ್ಯೆ 1 ರಲ್ಲಿ ಕಂಡು ಬರುವ ಅಬ್ದುಲ್ಲ ಮತ್ತು ನಾನು ಮೇಲೆ ಭಾವಚಿತ್ರದಲ್ಲಿ ಗುರುತಿಸಿರುವ ಅಬ್ದುಲ್ಲ ಒಂದೇ ಎಂದರೆ ಸರಿ. ಸಾಕ್ಷಿದಾರರು ಸದರ ಭಾವಚಿತ್ರವನ್ನು ನೋಡಿ ಒಪ್ಪಿದ್ದರಿಂದ ಸದರಿ ಭಾಗವನ್ನು ನಿಡಿ1 ಎಂದು ಗುರುತಿಸಲಾಯಿತು. ನಿಪಿ9 ರಲ್ಲಿರುವ ಮಾರಾಟಗಾರರಾದ ಅನ್ವರ್, ಛೋಟೆಸಾಬ್ ಮತ್ತು ಅಮೀರ್ ರವರು ನಾನು ಮೇಲೆ ನೋಡಿದ ಭಾವಚಿತ್ರದಲ್ಲಿರುವ ಉಳಿದ ಮೂವರು ವ್ಯಕ್ತಿಗಳಾಗಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಾಗುವುದಿಲ್ಲ ಎನ್ನುವರು. ನಿಪಿ9 ರ ಮೂಲ ದಾಖಲೆಯನ್ನು ನೋಡಿದರೆ ಗುರುತಿಸಬಹುದಾ ಎಂದರೆ ಸಾಕ್ಷಿದಾರರು ಗುರುತಿಸಬಹುದು ಎನ್ನುವರು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.